# **ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್** (SSE)
# **ಪದೇ ಪದೇ ಕೇಳಿಬರುವ ಪ್ರಶ್ನೆಗಳು**

## ಸಾಮಾಜಿಕ ಉದ್ದೇಶದ ಪ್ರಾಮುಖ್ಯತೆ

### 1. **ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್** (SSE) **ಅಂದರೇನು**?

ಉತ್ತರ: ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ (SSE) ಎಂದರೆ, ಸ್ಟಾಕ್ ವಿನಿಮಯ ತಂತ್ರದ ಮೂಲಕ ಸಾರ್ವಜನಿಕರಿಂದ ನಿಧಿಗಳನ್ನು ಸಂಗ್ರಹಿಸಲು ಸಾಮಾಜಿಕ ಉದ್ದಿಮೆ(ಗಳು)ಗಳಿಗೆ (ಸಾಮಾಜಿಕ ಉದ್ದಿಮೆಯ ಕುರಿತಾದ ಹೆಚ್ಚಿನ ವಿವರಗಳಿಗೆ ದಯವಿಟ್ಟು ಪ್ರ. 2 ನೋಡಿ) ನೆರವಾಗಬಲ್ಲ ಪ್ರಸ್ತುತದ ಸ್ಟಾಕ್ ಎಕ್ಸ್‌ಚೇಂಜ್‌ನ ಒಂದು ಪ್ರತ್ಯೇಕ ವರ್ಗ. ಪ್ರಮಾಣೀಯ ಸಾಮಾಜಿಕ ಪ್ರಭಾವವನ್ನು ಸೃಷ್ಟಿಸುತ್ತಿರುವ ಮತ್ತು ಅಂತಹ ಪ್ರಭಾವವನ್ನು ವರದಿ ಮಾಡುತ್ತಿರುವ ಆ ಆಯ್ದ ಸಂಸ್ಥೆಗಳಿಗೆ ನೆರವಾಗುವಂತಹ ಸಾಮಾಜಿಕ ಉದ್ದಿಮೆಗಳು ಮತ್ತು ನಿಧಿ ಒದಗಣೆದಾರರ ನಡುವೆ SSE ಒಂದು ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ನೋಂದಣಿ ಅರ್ಹತೆಗಳನ್ನು ಪೂರೈಸುವ (ನೋಂದಣಿ ಅರ್ಹತೆ ಕುರಿತಾದ ವಿವರಗಳಿಗೆ ದಯವಿಟ್ಟು ಪ್ರ. 9 ನೋಡಿ) ಕೆಲವು ರೀತಿಯ ಸಾಮಾಜಿಕ ಉದ್ದಿಮೆಗಳು, ಅಂದರೆ ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಎಸ್ಎಸ್ಇದಲ್ಲಿ ನೋಂದಣಿ ಮಾಡಿಸಿ ತಮ್ಮ ಸಾಮಾಜಿಕ ಪ್ರಭಾವದ ಕುರಿತು ಸತತವಾಗಿ ಬಿಡುಗಡೆ ಮಾಡಬಹುದು. ಇಂತಹ ಎನ್‌ಪಿಒಗಳು, ಎಸ್ಎಸ್ಇ ಮೂಲಕ ನಿಧಿಗಳನ್ನು ಸಂಗ್ರಹಿಸಲು ಆಯ್ಕೆ ಮಾಡಿಕೊಳ್ಳಬಹುದು ಅಥವಾ ಆಯ್ಕೆ ಮಾಡಿಕೊಳ್ಳದಿರಲೂ ಬಹುದಾದರೂ, ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಾಮಾಜಿಕ ಪ್ರಭಾವ ಒಳಗೊಂಡಂತೆ, ಬಿಡುಗಡೆ ಮಾಡುವುದನ್ನು ಮುಂದುವರಿಸಬಹುದು.

### 2. **ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಅರ್ಥದಲ್ಲಿ ಸಾಮಾಜಿಕ ಉದ್ದಿಮೆ ಅಂದರೇನು ಅಥವಾ ಯಾವ ಸಂಸ್ಥೆಯು ತನ್ನನ್ನು ತಾನು ಸಾಮಾಜಿಕ ಉದ್ದಿಮೆ ಎಂದು ಗುರುತಿಸಿಕೊಳ್ಳಬಹುದು?**

ಉತ್ತರ: ಧನಾತ್ಮಕ ಸಾಮಾಜಿಕ ಪ್ರಭಾವವನ್ನು ಸೃಷ್ಟಿಸುವ ಚಟುವಟಿಕೆಯಲ್ಲಿ ತೊಡಗಿರುವ ಮತ್ತು ತಮ್ಮ ಸಾಮಾಜಿಕ ಉದ್ದೇಶದ ಪ್ರಾಮುಖ್ಯತೆಯನ್ನು ಪೂರೈಸುವ ಸಾಮಾಜಿಕ ಉದ್ದಿಮೆಗಳ ಎರಡು ಕೆಳಕಂಡ ರೂಪಗಳನ್ನು ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಗುರುತಿಸುತ್ತದೆ.

i. ಲಾಭಕ್ಕಾಗಿಯಲ್ಲದ ಸಂಸ್ಥೆ (ವಿವರಗಳಿಗೆ ದಯವಿಟ್ಟು ಪ್ರ. 5 ನೋಡಿ)

ii. ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆ (ವಿವರಗಳಿಗೆ ದಯವಿಟ್ಟು ಪ್ರ. 6 ನೋಡಿ)

ಸಾಮಾಜಿಕ ಉದ್ದೇಶದ ಪ್ರಾಮುಖ್ಯತೆಯನ್ನು ಸ್ಥಾಪಿಸುವ ಸಲುವಾಗಿ ಯಾವುದೇ ಸಂಸ್ಥೆಯು(ಅದು ಲಾಭಕ್ಕಾಗಿಯಲ್ಲದ ಸಂಸ್ಥೆಯಾಗಿರಬಹುದು (NPO) ಅಥವಾ ಲಾಭಕ್ಕಾಗಿ ಇರುವ ಉದ್ದಿಮೆಯಾಗಿರಬಹುದು (FPE)], ಐಸಿಡಿಆರ್ ನಿಯಮಗಳ ನಿಯಮ 292E(2) ಅಡಿ ತಿಳಿಸಲಾಗಿರುವ ಎಲ್ಲಾ ಮೂರು ಅರ್ಹತೆಗಳನ್ನೂ ಪೂರೈಸಬೇಕು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ಅರ್ಹತೆಯು, ಸಂಸ್ಥೆಯು ನಿಯಮ 292E(2)(a) ಅಡಿ ತಿಳಿಸಲಾಗಿರುವ ಚಟುವಟಿಕೆಗಳಲ್ಲಿ ತೊಡಗಿರಬೇಕು ಮತ್ತು ಆ ಸಂಸ್ಥೆಯು ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಅಭಿವೃದ್ಧಿ ಆದ್ಯತೆಗಳಲ್ಲಿ ಅತಿಕಡಿಮೆ ಕಾರ್ಯಕ್ಷಮತೆ ದಾಖಲಿಸಿರುವ ಸೇವಾವಂಚಿತ ಅಥವಾ ಕಡಿಮೆ ಸೇವೆಗಳಿರುವ ಜನಸಂಖ್ಯೆಯ ವರ್ಗಗಳು ಅಥವಾ ಪ್ರದೇಶಗಳನ್ನು ಗುರಿಯಿರಿಸಿಕೊಂಡಿರಬೇಕು.

ಮೇಲಾಗಿ, ಒಂದು ಸಾಮಾಜಿಕ ಉದ್ದಿಮೆಯಾಗಿ ಗುರುತಿಸಲ್ಪಡುವುದಕ್ಕೆ, ಅದು ಗುರಿಯಿರಿಸಲಾದ ಜನಸಂಖ್ಯೆಗಾಗಿ ಇರುವ ಅರ್ಹ ಚಟುವಟಿಕೆಗಳ ಪೈಕಿ 67% ಚಟುವಟಿಕೆಗಳು ಈ ಕೆಳಕಂಡಂತೆ ಪ್ರದರ್ಶಿತಗೊಂಡಿರಬೇಕು:

i. ತಕ್ಷಣದ ಹಿಂದಿನ ಅದರ 3-ವರ್ಷ ಸರಾಸರಿಯ ಆದಾಯಗಳ ಪೈಕಿ ಕನಿಷ್ಟ 67% ಆದಾಯವು ಗುರಿಯಿರಿಸಲಾದ ಜನಸಂಖ್ಯೆಯ ಸದಸ್ಯರಿಗಾಗಿ ಅರ್ಹ ಚಟುವಟಿಕೆಗಳನ್ನು ಒದಗಿಸಿದುದರಿಂದ ಬಂದಿರಬೇಕು;

   ಅಥವಾ

ii. ತಕ್ಷಣದ ಹಿಂದಿನ 3-ವರ್ಷಗಳ ಸರಾಸರಿ ವ್ಯಯದ ಪೈಕಿ ಕನಿಷ್ಟ 67% ಗುರಿಯಿರಿಸಲಾದ ಜನಸಂಖ್ಯೆಯ ಸದಸ್ಯರಿಗಾಗಿ ಒದಗಿಸಲಾದ ಅರ್ಹ ಚಟುವಟಿಕೆಗಳಿಗಾಗಿ ವ್ಯಯಿಸಲ್ಪಟ್ಟಿರಬೇಕು;

   ಅಥವಾ

iii. ಒದಗಿಸಲಾದ ಅರ್ಹ ಚಟುವಟಿಕೆಗಳ ಗುರಿಯಿರಿಸಲಾದ ಜನಸಂಖ್ಯೆಯ ಸದಸ್ಯರು, ತಕ್ಷಣದ ಹಿಂದಿನ 3-ವರ್ಷ ಸರಾಸರಿ ಒಟ್ಟೂ ಗ್ರಾಹಕ ಬೇಸ್ ಮತ್ತು/ಅಥವಾ ಫಲಾನುಭವಿಗಳ ಒಟ್ಟೂಸಂಖ್ಯೆಯ ಪೈಕಿ ಕನಿಷ್ಟ 67% ಮಂದಿ ಆಗಿರಬೇಕು.

ಆದರೆ, ಕಾರ್ಪೊರೇಟ್ ಫೌಂಡೇಶನ್‌ಗಳು, ರಾಜಕೀಯ ಅಥವಾ ಧಾರ್ಮಿಕ ಸಂಘಗಳು ಅಥವಾ ಚಟುವಟಿಕೆಗಳು, ವೃತ್ತಿಪರ ಅಥವಾ ವ್ಯಾಪಾರ ಸಂಘಗಳು, ಕೈಗೆಟುಕುವ ದರದ ಗೃಹಗಳನ್ನು ಹೊರತುಪಡಿಸಿ, ಮೂಲಸೌಕರ್ಯ ಮತ್ತು ಗೃಹನಿರ್ಮಾಣ ಸಂಸ್ಥೆಗಳು ಸಾಮಾಜಿಕ ಉದ್ದಿಮೆ ಎಂದು ಗುರುತಿಸಲು ಅರ್ಹತೆ ಹೊಂದಿರುವುದಿಲ್ಲ.

## 3. ಸಾಮಾಜಿಕ ಉದ್ದಿಮೆಗಳಿಗೆ ಕಡ್ಡಾಯಗೊಳಿಸಲಾಗಿರುವ ಕನಿಷ್ಟ ವರದಿ ಮಾಡುವಿಕೆ

**ಮಾನದಂಡಗಳೇನು?**

ಉತ್ತರ.ಅಭಿವೃದ್ಧಿಪಡಿಸಲಾದ ಮತ್ತು ಅನುಷ್ಠಾನಗೊಳಿಸಲಾಗುತ್ತಿರುವ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಮಾಣಗಳ ಕಾರ್ಯಚೌಕಟ್ಟಿನಿಂದ ಅಂಶಗಳನ್ನು ಗುರುತಿಸುವ ಮೂಲಕ ಕನಿಷ್ಟ ವರದಿಮಾಡುವಿಕೆ ಮಾನದಂಡಗಳನ್ನು ಸೃಷ್ಟಿಸಲಾಗಿದೆ. ವರದಿಮಾಡುವಿಕೆ ಮಾನದಂಡದ ಪ್ರಮುಖಾಂಶಗಳು ಈ ಕೆಳಕಂಡಂತಿವೆ:

i. **ವಿಭಾಗ 1-ಪ್ರಮುಖ ಉದ್ದೇಶ ಮತ್ತು ಗುರಿ ನಿಗದಿ**
   (a) ಬಗೆಹರಿಸಬೇಕಾಗಿರುವ ಸಾಮಾಜಿಕ ಸಮಸ್ಯೆ
   (b) ಸೇವೆ ಒದಗಿಸಬೇಕಾಗಿರುವ ಗುರಿಯಿರಿಸಲಾದ ವರ್ಗ
   (c) ಸಮಸ್ಯೆಯನ್ನು ಬಗೆಹರಿಸಲು ದೃಷ್ಟಿಕೋನ

ii. **ವಿಭಾಗ2-ಸಾಮಾಜಿಕ ಪ್ರಭಾವದ ಅಂಕಪಟ್ಟಿ(ಸ್ಕೋರ್ ಕಾರ್ಡ್)**
   (a) ಸೇವೆ ಒದಗಿಸಿದ ಗುರಿಯಿರಿಸಲಾದ ವರ್ಗದ ವ್ಯಾಪ್ತಿ
   (b) ಸರಾಸರಿ ವ್ಯಕ್ತಿಯ ಮೇಲೆ ಪ್ರಭಾವದ ತೀವ್ರತೆ
   (c) ಆದಾಯ, ಸಾಮಾಜಿಕ ಸಮಾನತೆ ಮತ್ತು ವೈವಿಧ್ಯತೆಯ ಆಯಾಮಗಳು

III. **ವಿಭಾಗ 3- ಸಾಮಾನ್ಯ ಮಾಹಿತಿ**
   (a) ಆಡಳಿತಮಂಡಳಿಯಸದಸ್ಯರು
   (b) ಹಿಂದಿನ ನಿಧಿನೆರವಿನ ಇತಿಹಾಸದ ಪ್ರದರ್ಶನ
   (c) ಹಣಕಾಸು, ನೋಂದಣಿಗಳು ಅಥವಾ ಪರವಾನಗಿಗಳು

**4. ಯಾವ ಯಾವ ಸಾಮಾಜಿಕ ಉದ್ದಿಮೆಗಳು ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್/ಸ್ಟಾಕ್ ಎಕ್ಸ್ ಚೇಂಜ್ ಮೂಲಕ ನೋಂದಣಿ ಮಾಡಲು ಅಥವಾ ನಿಧಿ ಸಂಗ್ರಹಿಸಲು ಅರ್ಹವಾಗಿರುವುದಿಲ್ಲ?**

ಉತ್ತರ.ಈ ಕೆಳಕಂಡ ಸಂದರ್ಭಗಳಲ್ಲಿ ಒಂದು ಸಾಮಾಜಿಕ ಉದ್ದಿಮೆಯು ಸಾಮಾಜಿಕ ಸ್ಟಾಕ್ ಎಕ್ಸ್ ಕ್ಸಚೇಂಜ್/ಸ್ಟಾಕ್ ಎಕ್ಸ್ ಚೇಂಜ್ ಮೂಲಕ ನೋಂದಣಿ ಮಾಡಲು ಅಥವಾ ನಿಧಿ ಸಂಗ್ರಹಿಸಲು ಅರ್ಹವಾಗಿರುವುದಿಲ್ಲ –

a) ಅದರ ಯಾವುದೇ ಪ್ರಾಯೋಜಕರು, ಪ್ರಾಯೋಜಕರ ಗುಂಪು ಅಥವಾ ನಿರ್ದೇಶಕರು ಅಥವಾ ಮಾರಾಟ ಮಾಡುತ್ತಿರುವ ಶೇರುದಾರರು(ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆಯ ಸಂದರ್ಭದಲ್ಲಿ) ಅಥವಾ ಟ್ರಸ್ಟೀಗಳು

SEBIದಿಂದ ಭದ್ರುತಾ ಮಾರುಕಟ್ಟೆಗೆ ಪ್ರವೇಶಾವಕಾಶದಿಂದ ನಿಷೇಧಿಸಲ್ಪಟ್ಟಿದ್ದರೆ.

b) ಸಾಮಾಜಿಕ ಉದ್ದಿಮೆಯ ಯಾವುದೇ ಪ್ರಾಯೋಜಕರು ಅಥವಾ ನಿರ್ದೇಶಕರು ಅಥವಾ ಟ್ರಸ್ಟೀಗಳು, SEBIದಿಂದ ಭದ್ರುತಾ ಮಾರುಕಟ್ಟೆಗೆ ಪ್ರವೇಶಾವಕಾಶದಿಂದ ನಿಷೇಧಿಸಲ್ಪಟ್ಟ ಯಾವುದೇ ಇತರ ಸಂಸ್ಥೆ ಅಥವಾ ಸಾಮಾಜಿಕ ಉದ್ದಿಮೆಯ ಪ್ರಾಯೋಜಕರು ಅಥವಾ ನಿರ್ದೇಶಕರಾಗಿದ್ದರೆ;

c) ಆ ಸಾಮಾಜಿಕ ಉದ್ದಿಮೆ ಅಥವಾ ಅದರ ಯಾವುದೇ ಪ್ರಾಯೋಜಕರು ಅಥವಾ ನಿರ್ದೇಶಕರು ಅಥವಾ ಟ್ರಸ್ಟೀಗಳು ಉದ್ದೇಶಪೂರ್ವಕ ಡೀಫಾಲ್ಟರ್ ಆಗಿದ್ದರೆ ಅಥವಾ ವಂಚನೆ ಮಾಡುವ ಸಾಲಿಗರಾಗಿದ್ದರೆ;

d) ಟ್ರಸ್ಟೀಗಳನ್ನು ಗೃಹ ವ್ಯವಹಾರಗಳ ಸಚಿವಾಲಯ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಥವಾ ದತ್ತಿ ಆಯುಕ್ತರು ಅಥವಾ ಯಾವುದೇ ಇತರ ಕಾನೂನು ಮಂಡಳಿಯಿಂದ ತನ್ನ ಚಟುವಟಿಕೆಗಳನ್ನು ನಡೆಸಲು ಅಥವಾ ನಿಧಿ ಸಂಗ್ರಹಿಸಲು ನಿಷೇಧಿಸಲ್ಪಟ್ಟಿದ್ದರೆ

**5. ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಅರ್ಥದಲ್ಲಿ ಲಾಭಕ್ಕಾಗಿಯಲ್ಲದ ಸಂಸ್ಥೆ ಅಂದರೇನು?**
**ಅಥವಾ**
**ಸಾಮಾಜಿಕ ಸ್ಟಾಕ್ಎಕ್ಸ್ ಚೇಂಜ್ ಅರ್ಥದಲ್ಲಿ ಯಾವ ಸಂಸ್ಥೆಯನ್ನು ಲಾಭಕ್ಕಾಗಿಯಲ್ಲದ ಸಂಸ್ಥೆ ಎಂದು ಗುರುತಿಸಬಹುದು?**

ಉತ್ತರ:ಸಾಮಾಜಿಕ ಉದ್ದಿಮೆಯಾಗಿ (ದಯವಿಟ್ಟು ಪ್ರ. 2 ನೋಡಿ)ಗುರುತಿಸಲು ಅಗತ್ಯವಾದ ಅರ್ಹತೆಗಳನ್ನು ಹೊಂದಿದ ಮತ್ತು ಕೆಳಕಂಡ ಯಾವುದೇ ಸಂಸ್ಥೆಗಳನ್ನು ಲಾಭಕ್ಕಾಗಿಯಲ್ಲದ ಸಂಸ್ಥೆ ಎಂದು ಹೇಳಬಹುದು:

i. ತತ್ಸಂಬಂಧಿತ ರಾಜ್ಯದ ಸಾರ್ವಜನಿಕ ಟ್ರಸ್ಟ್ ಕಾನೂನಿನಡಿ ನೋಂದಣಿಯಾಗಿರುವ ದತ್ತಿ ಟ್ರಸ್ಟ್;
ii. ಸೊಸೈಟಿಗಳ ನೋಂದಣಿ ಕಾಯಿದೆ, 1860(1860ದ 2 ಅಡಿ ನೋಂದಣಿಯಾಗಿರುವ ದತ್ತಿ ಸೊಸೈಟಿ;
iii. ಕಂಪನಿಗಳ ಕಾಯಿದೆ, 2013(2013ದ 18) ಅಡಿ ಸ್ಥಾಪಿತವಾಗಿರುವ ಸಂಸ್ಥೆ;
iv. SEBI ವಿನಿರ್ದಿಷ್ಟಗೊಳಿಸಿರುವ ಯಾವುದೇ ಇತರ ಸಂಸ್ಥೆ;

**6. ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಅರ್ಥದಲ್ಲಿಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆ ಎಂದರೇನು? ಅಥವಾ**
**ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಅರ್ಥದಲ್ಲಿ ಯಾವ ಸಂಸ್ಥೆಯನ್ನು ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆ ಎಂದು ಗುರುತಿಸಬಹುದು?**

ಉತ್ತರ:ಸಾಮಾಜಿಕ ಉದ್ದಿಮೆಯಾಗಿ ಗುರುತಿಸಲ್ಪಡಬಹುದಾದ ಅರ್ಹತೆ ಹೊಂದಿರುವ

(ದಯವಿಟ್ಟು ಪ್ರ.2 ನೋಡಿ) ಮತ್ತು ಕೆಳಕಂಡ ಯಾವುದೇ ಸಂಸ್ಥೆಗಳನ್ನು ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆ ಎಂದು ಹೇಳಬಹುದು:

i. ಲಾಭಕ್ಕಾಗಿ ಕಾರ್ಯಾಚರಣೆ ನಡೆಸುತ್ತಿರುವ, ಕಂಪನಿಗಳ ಕಾಯಿದೆ 2013 ಅಡಿ ಬರುವ ಸಂಸ್ಥೆ ಮತ್ತು ಕಂಪನಿಗಳ ಕಾಯಿದೆಯ ಅನುಚ್ಛೇದ 8ರ ಅಡಿ(2013ದ 18) ಸ್ಥಾಪಿತವಾಗಿರುವ ಸಂಸ್ಥೆಯನ್ನು ಒಳಗೊಂಡಿರದ ಸಂಸ್ಥೆ;

ii. ಲಾಭಕ್ಕಾಗಿ ಕಾರ್ಯಾಚರಣೆ ನಡೆಸುತ್ತಿರುವ ಕಾರ್ಪೊರೇಟ್ ಮಂಡಳಿ

**7. ಲಾಭಕ್ಕಾಗಿಯಲ್ಲದ ಒಂದು ಸಂಸ್ಥೆಯು, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಮೂಲಕ ಯಾವ ಯಾವ ವಿಧಾನಗಳಲ್ಲಿ ನಿಧಿಗಳನ್ನು ಸಂಗ್ರಹಿಸಬಹುದು?**

ಉತ್ತರ:ಲಾಭಕ್ಕಾಗಿಯಲ್ಲದ ಸಂಸ್ಥೆಯು, ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಸಿದ ನಂತರ, ಈ ಕೆಳಕಂಡ ವಿಧಾನಗಳ ಮೂಲಕ ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್‌ನಲ್ಲಿ ನಿಧಿಗಳನ್ನು ಸಂಗ್ರಹಿಸಬಹುದು

i. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನೀಡಿಕೆ [ಖಾಸಗಿ ಪ್ಲೇಸ್‌ಮೆಂಟ್ ಅಥವಾ ಸಾರ್ವಜನಿಕ ನೀಡಿಕೆ ಮೂಲಕ]
ii. ಮ್ಯೂಚುವಲ್ ಫಂಡ್ ಯೋಜನೆಗಳ ಮೂಲಕ ದೇಣಿಗೆಗಳು [SEBI ವಿನಿರ್ದೇಶನಗೊಳಿಸಿರುವಂತೆ]
iii. ಭವಿಷ್ಯತ್ತಿನಲ್ಲಿ SEBI ನಿರ್ದಿಷ್ಟಗೊಳಿಸಬಹುದಾದ ಯಾವುದೇ ಇತರ ವಿಧಾನ

**8. ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್ ಮೂಲಕ ನಿಧಿಗಳನ್ನು ಸಂಗ್ರಹಿಸುವ ಸಲುವಾಗಿ ಲಾಭಕ್ಕಾಗಿಯಲ್ಲದ ಸಂಸ್ಥೆಯು ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವೆ?**

ಉತ್ತರ: ಹೌದು, ಲಾಭಕ್ಕಾಗಿಯಲ್ಲದ ಸಂಸ್ಥೆಯು ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್ ಮೂಲಕ ನಿಧಿಗಳನ್ನು ಸಂಗ್ರಹಿಸುವ ಮುನ್ನ ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್‌ನೊಂದಿಗೆ ಕಡ್ಡಾಯವಾಗಿ ನೋಂದಣಿ ಮಾಡಿಕೊಂಡಿರಬೇಕು.
ಆದರೆ, ಲಾಭಕ್ಕಾಗಿಯಲ್ಲದ ಸಂಸ್ಥೆಯು, ಅದು ಸಾಮಾಜಿಕ ಸ್ಟಾಕ್ಎಕ್ಸ್‌ಚೇಂಜ್‌ನೊಂದಿಗೆ ನೋಂದಣಿ ಮಾಡಿಕೊಂಡಿದ್ದರೂ ಅಥವಾ ಇಲ್ಲದಿದ್ದರೂ, ಕಾನೂನಿನಡಿ ಅನುಮತಿಸಲಾಗಿರುವಂತೆ, ಯಾವುದೇ ಇತರ ಮಾರ್ಗಗಳ ಮೂಲಕ ನಿಧಿಗಳ ಸಂಗ್ರಹಣೆಯನ್ನು ಮುಂದುವರಿಸಬಹುದು.

**9. ಲಾಭಕ್ಕಾಗಿಯಲ್ಲದ ಸಂಸ್ಥೆಗಳ ವಿಷಯದಲ್ಲಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ನೋಂದಣಿ ಮಾಡಿಸಿಕೊಳ್ಳುವುದಕ್ಕೆ ಯಾವ ಅರ್ಹತೆಗಳಿರಬೇಕು?**

ಉತ್ತರ: ಪಟ್ಟಿ ಮಾಡಿದ ಇತರ ಯಾವುದೇ ಸಂಸ್ಥೆಗಳು ಯಾವುದೇ ನಿಯಮ ಅಥವಾ ಮಾರ್ಗಸೂಚಿಗಳನ್ನು ಪಾಲಿಸುವಲ್ಲಿ ವಿಫಲವಾದರೆ, ಆಡಳಿತಾತ್ಮಕ ಎಚ್ಚರಿಕೆ ನೀಡುವ, SEBI ಕಾಯಿದೆಯ ಅಧ್ಯಾಯ VIA ಅಡಿ ದಂಡ ಹಾಕುವ, ಅಥವಾ SEBI ಕಾಯಿದೆಯ ಪರಿಚ್ಛೇದ 11 ರ ಅಡಿ ಉಚ್ಚಾಟನೆ ಮತ್ತು/ಅಥವಾ ದಂಡ ವಿಧಿಸುವಂತಹ ಕ್ರಮ ತೆಗೆದುಕೊಳ್ಳಲು SEBI ಹಕ್ಕನ್ನು ಹೊಂದಿರುತ್ತದೆ.

**10. ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನ ಪಟ್ಟಿಯಲ್ಲಿ ಸೇರ್ಪಡೆಗೊಳ್ಳಲು ಅದರೊಂದಿಗೆ ನೋಂದಣಿ ಮಾಡಿಕೊಂಡಿರುವುದು ಕಡ್ಡಾಯವೆ?**

ಉತ್ತರ.ಲಾಭಕ್ಕಾಗಿಯಲ್ಲದ ಸಂಸ್ಥೆಗಳು, ಐಸಿಡಿ ಆಧಿನಿಯಮಗಳ 292F ನಿಯಮದಡಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ನೋಂದಣಿಯಾಗಿದ್ದರೆ ಪಟ್ಟಿಯಲ್ಲಿ ಸೇರ್ಪಡೆ ಕೋರುವುದು ಕಡ್ಡಾಯವಲ್ಲದಿದ್ದರೂ, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಮೂಲಕ ಅದು ನಿಧಿಸಂಗ್ರಹಣೆಗಳನ್ನು ಕೈಗೊಳ್ಳುವ ಮುನ್ನ, ಕಡ್ಡಾಯವಾಗಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ನೋಂದಣಿಯಾಗಿರಬೇಕು.

ಲಾಭಕ್ಕಾಗಿಯಲ್ಲದ ಸಂಸ್ಥೆಯು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಲು ಆಯ್ಕೆ ಮಾಡಿಕೊಂಡರೂ ಅದರ ಮೂಲಕ ನಿಧಿಗಳನ್ನು ಸಂಗ್ರಹಿಸದಿರಲೂ ಆಯ್ಕೆ ಮಾಡಿಕೊಳ್ಳಬಹುದು. ಅದು ಯಾವುದೇ ಇತರ ವಿಧಾನಗಳ ಮೂಲಕವಾಗಿಯೂ ನಿಧಿಗಳನ್ನು ಸಂಗ್ರಹಿಸುತ್ತಿರಬಹುದು.


**11. ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಕಾರ್ಯತಂತ್ರದ ಮೂಲಕ ಲಾಭಕ್ಕಾಗಿಯಲ್ಲದ ಸಂಸ್ಥೆಗಳಿಗೆ ಯಾವ ರೀತಿಯ ಯೋಜಿತ ಹಣಕಾಸು ಉತ್ಪನ್ನ ಲಭ್ಯವಿದೆ?**

ಉತ್ತರ.ಎನ್‌ಪಿಒಗಳಿಗಾಗಿ ಹಣಕಾಸು ಸಂಗ್ರಹಣೆಯ ಭದ್ರತಾಪತ್ರಗಳು/ವಿಧಾನದ ಪಟ್ಟಿಯನ್ನುಕೆಳಗೆನೀಡಲಾಗಿದೆ:

i. **ಅಭಿವೃದ್ಧಿ ಪ್ರಭಾವ ಬಾಂಡ್‌ಗಳು**(Development Impact Bonds)-ಇವು ಯೋಜಿತ ಹಣಕಾಸು ಉತ್ಪನ್ನಗಳಾಗಿದ್ದು, ಮೊದಲೇ ಒಪ್ಪಿಕೊಂಡ ದರಗಳಲ್ಲಿ ಮೊದಲೇ ಒಪ್ಪಿಕೊಂಡ ಸಾಮಾಜಿಕ ಪ್ರಮಾಣಗಳನ್ನು ಪೂರೈಸುವ ಒಂದು

ಯೋಜನೆಯು ಪೂರ್ಣಗೊಂಡರೆ, ಆ ಯೋಜನೆಯ ಸೇವಾ ಸರಬರಾಜುದಾರರು "ಫಲಿತಾಂಶ ನಿಧಿಸಹಾಯಕರು(ಔಟ್‌ಕಂಫಂಡರ್ಸ್)"ಎಂದು ಕರೆಯಲ್ಪಡುವ ದಾನಿಯಿಂದ ಅನುದಾನಗಳನ್ನು ಸ್ವೀಕರಿಸುತ್ತದೆ.

ಡಿಐಬಿ ಯೋಜನೆಯ ಮೂಲ ನೀತಿ ಎಂದರೆ, ಮೊದಲೇ ಒಪ್ಪಿಕೊಂಡ ವೆಚ್ಚ/ದರಗಳಲ್ಲಿ ಮೊದಲೇ ಒಪ್ಪಿಕೊಂಡ ಸಾಮಾಜಿಕ ಪ್ರಮಾಣಗಳನ್ನು ಒಂದು ಎನ್‌ಪಿಒ ಒದಗಿಸಿದ ಬಳಿಕವಷ್ಟೇ ಅದಕ್ಕೆ ಅನುದಾನ ನೀಡಲಾಗುತ್ತದೆ. ಸಾಮಾಜಿಕ ಪ್ರಮಾಣಗಳನ್ನು ಸಾಧಿಸಿದಾಗ ಕೊಡುವ ಈ ಅನುದಾನದ ದಾನಿಯನ್ನು "ಫಲಿತಾಂಶ ನಿಧಿಸಹಾಯಕರು"ಎಂದು ಕರೆಯಲಾಗುತ್ತದೆ. ವಾಸ್ತವಾಂಶದ ನಂತರ ಪಾವತಿ ಮಾಡುವ ಫಲಿತಾಂಶ ನಿಧಿಸಹಾಯಕರ ಸಂದರ್ಭದಲ್ಲಿ, ಎನ್‌ಪಿಒ ತನ್ನ ಕಾರ್ಯಾಚರಣೆಗಳ ಆರ್ಥಿಕ ನೆರವಿಗೆ ತಾನೇ ನಿಧಿಸಂಗ್ರಹಣೆ ಮಾಡಬೇಕಾಗುತ್ತದೆ. ಇಂತಹ ನಿಧಿಸಹಾಯಕರನ್ನು "ಅಪಾಯ ನಿಧಿಸಹಾಯಕರು(''Risk Funder'')ಎಂದು ಕರೆಯಲಾಗುತ್ತದೆ. ಅಪಾಯ ನಿಧಿಸಹಾಯಕರು, ಪೂರ್ವಪಾವತಿಯ ಆಧಾರದ ಮೇಲೆ ಕಾರ್ಯಾಚರಣೆಗಳ ಆರ್ಥಿಕ ನೆರವಿಗೆ ನೆರವಾಗುವುದು ಮಾತ್ರವಲ್ಲದೆ, ಎನ್‌ಪಿಒ ಸಾಮಾಜಿಕ ಪ್ರಮಾಣವನ್ನು ಸಾಧಿಸದಿರುವ ಅಪಾಯಕ್ಕೂ ಬಾಧ್ಯತೆ ಹೊರುತ್ತಾರೆ. ಈ ಅಪಾಯಕ್ಕೆ ಪರಿಹಾರ ಒದಗಿಸುವ ಸಲುವಾಗಿ, ಅಪಾಯ ನಿಧಿಸಹಾಯಕರು, ಸಾಮಾಜಿಕ ಪ್ರಮಾಣಗಳು ಪೂರ್ಣಗೊಂಡ ಸಂದರ್ಭದಲ್ಲಿ ಸಣ್ಣ ಫಲಿತಾಂಶಗಳನ್ನು (ಲಾಭಗಳನ್ನು)ಗಳಿಸುತ್ತಾರೆ.




**12. ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಮೂಲಕ ನಿಧಿಸಂಗ್ರಹಣೆ ಮಾಡುವ ಸಲುವಾಗಿ ಲಾಭಕ್ಕಾಗಿರುವ ಸಾಮಾಜಿಕ ಉದ್ದಿಮೆಗಳು ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವೆ?**

ಉತ್ತರ:ಇಲ್ಲ, ಎಸ್‌ಎಸ್‌ಇ ಮೂಲಕ ನಿಧಿಸಂಗ್ರಹಣೆ ಮಾಡುವ ಮುನ್ನ ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆಯು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಲ್ಲ. ಆದರೂ, ಆ ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆಯು, ಎಸ್‌ಎಸ್‌ಇ ಮೂಲಕ ನಿಧಿಸಂಗ್ರಹಿಸುವ ಮುನ್ನ, ಐಸಿಡಿ ಅಧಿನಯಮಗಳು, ಎಐಎಫ್ ನಿಯಮಗಳ [ತನ್ನ ನಿಧಿಸಂಗ್ರಹಣೆಯ ವಿಧಾನಗಳಿಗೆ ಅನ್ವಯವಾಗುವಂತೆ] ಎಲ್ಲಾ ನಿಯಮಗಳನ್ನೂ ಪಾಲಿಸಬೇಕಾಗುತ್ತದೆ.

**13. ಒಂದು ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆಯು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಮೂಲಕ ಯಾವ ರೀತಿ ನಿಧಿ ಸಂಗ್ರಹಿಸಬಹುದು?**

ಉತ್ತರ:ಒಂದು ಲಾಭಕ್ಕಾಗಿ ಇರುವ ಉದ್ದಿಮೆಯು ಇವುಗಳ ಮೂಲಕ ನಿಧಿ ಸಂಗ್ರಹಿಸಬಹುದು-

i. ಈಕ್ವಿಟಿ ಶೇರುಗಳ ನೀಡಿಕೆ(ಪ್ರಧಾನ ಮಂಡಳಿ, ಎಸ್‌ಎಮ್‌ಇ ವೇದಿಕೆ ಅಥವಾ ಸಂದರ್ಭಕ್ಕೆ ತಕ್ಕಂತೆ ಸ್ಟಾಕ್ ವಿನಿಮಯದ ಆವಿಷ್ಕಾರಕರ ಬೆಳವಣಿಗೆ ವೇದಿಕೆಯ

ಮೇಲೆ)

ii. ಸಾಮಾಜಿಕ ಪ್ರಭಾವ ನಿಧಿಯೂ ಒಳಗೊಂಡಂತೆ ಪರ್ಯಾಯ ಹೂಡಿಕೆ ನಿಧಿಗೆ ಈಕ್ವಿಟಿ ಶೇರುಗಳ ನೀಡಿಕೆ
iii. ಸಾಲ ಸಂಲೇಖಗಳ ನೀಡಿಕೆ
iv. ಭವಿಷ್ಯತ್ತಿನಲ್ಲಿ SEBI ನಿರ್ದಿಷ್ಟಗೊಳಿಸಬಹುದಾದ ಯಾವುದೇ ಇತರ ವಿಧಾನ

ಲಾಭಕ್ಕಾಗಿ ಇರುವ ಸಂಸ್ಥೆಗಳು, ಸಂದರ್ಭಕ್ಕೆ ತಕ್ಕಂತೆ, ಪ್ರಧಾನ ಮಂಡಳಿ, ಎಸ್‌ಎಮ್‌ಇ ವೇದಿಕೆ ಅಥವಾ ಸ್ಟಾಕ್ ವಿನಿಮಯದ ಆವಿಷ್ಕಾರಕರ ಬೆಳವಣಿಗೆ ವೇದಿಕೆಯ ಮೇಲೆ ಈಕ್ವಿಟಿ ಶೇರುಗಳನ್ನುನೀಡಿದರೆ, SEBI (ಐಸಿಡಿ ಅಧಿನಿಯಮಗಳು) 2018 ಅಡಿ ಕಡ್ಡಾಯಗೊಳಿಸಲಾಗಿರುವಂತೆ, ಆಯಾ ವೇದಿಕೆಗಾಗಿ ಇರುವ ಅರ್ಹತೆಗಳನ್ನೂ ಅವು ಪೂರೈಸಬೇಕಾಗುತ್ತದೆ.

ಅದೇ ರೀತಿ, ಎಐಎಫ್‌ಗಳಿಗೆ ಈಕ್ವಿಟಿ ಶೇರುಗಳನ್ನು ನೀಡುವುದಕ್ಕಾಗಿ, ಸಾಲಭದ್ರತೆಗಳನ್ನು ನೀಡುವುದಕ್ಕಾಗಿಯೂ ಅವು ಆಯಾ SEBI ನಿಯಮಗಳ ಅನುಸರಣೆ ಮಾಡಬೇಕಾಗುತ್ತದೆ.

**14. ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ವೇದಿಕೆಯಲ್ಲಿ ನೀಡಲಾಗುವ ಭದ್ರತಾ ಪತ್ರಗಳಲ್ಲಿ ರೀಟೇಲ್ ಹೂಡಿಕೆದಾರರು ಹೂಡಿಕೆ ಮಾಡಬಹುದೆ?**

ಉತ್ತರ. "SEBI (ಬಂಡವಾಳ ಮತ್ತು ಬಹಿರಂಗಪಡಿಸುವ ಅವಶ್ಯಕತೆ ವಿಷಯ)ನಿಯಮಗಳು, 2018 ಪ್ರಕಾರ ಒಬ್ಬ ರೀಟೇಲ್ ವೈಯಕ್ತಿಕ ಹೂಡಿಕೆದಾರ ಎಂದರೆ ಎರಡು ಲಕ್ಷ ರೂಪಾಯಿಗಳು ಮೀರದ ಮೊತ್ತಕ್ಕೆ ನಿರ್ದಿಷ್ಟ ಭದ್ರತೆಗಳಿಗೆ ಅರ್ಜಿ ಸಲ್ಲಿಸುವ ಅಥವಾ ಬಿಡ್ ಮಾಡುವವರು ಮತ್ತು ಸಾಂಸ್ಥಿಕೇತರ ಹೂಡಿಕೆದಾರರನ್ನು ರೀಟೇಲ್ ವೈಯಕ್ತಿಕ ಹೂಡಿಕೆದಾರರಲ್ಲದ ಹೂಡಿಕೆದಾರ ಮತ್ತು ಅರ್ಹತೆಯುಳ್ಳ ಸಾಂಸ್ಥಿಕ ಖರೀದಿದಾರ" . ರೀಟೇಲ್ ಹೂಡಿಕೆದಾರರು, ಪ್ರಧಾನ ಮಂಡಳಿಯಡಿ ಲಾಭಕ್ಕಾಗಿ ಇರುವ ಸಾಮಾಜಿಕ ಉದ್ದಿಮೆಯು ಒದಗಿಸುವ ಭದ್ರತಾ ಪತ್ರಗಳಲ್ಲಿ ಮಾತ್ರ ಹೂಡಿಕೆ ಮಾಡಬಹುದು. ಇತರ ಎಲ್ಲಾ ಸಂದರ್ಭಗಳಲ್ಲಿ, ಸಾಂಸ್ಥಿಕ ಹೂಡಿಕೆದಾರರು ಅಥವಾ ಸಾಂಸ್ಥಿಕ ಹೂಡಿಕೆದಾರರು ಮಾತ್ರ ಸಾಮಾಜಿಕ ಉದ್ದಿಮೆಗಳು ನೀಡುವ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಬಹುದು.

**15. ಲಾಭಕ್ಕಾಗಿ ಇರುವ ಸಂಸ್ಥೆಯು ಪರ್ಯಾಯ ಹೂಡಿಕೆನಿಧಿಗೆ ಈಕ್ವಿಟಿ ಶೇರುಗಳನ್ನು ನೀಡಬಹುದೆ?**

ಉತ್ತರ. ಹೌದು. ಪಟ್ಟಿ ಮಾಡದಿರುವ ಲಾಭಕ್ಕಾಗಿ ಇರುವ ಸಂಸ್ಥೆಯು ಪರ್ಯಾಯ ಹೂಡಿಕೆ ನಿಧಿಗೆ ಈಕ್ವಿಟಿ ಶೇರುಗಳನ್ನು ನೀಡಬಹುದು.

16. **ಕಳೆದ ವರ್ಷದ ನನ್ನ ಚಟುವಟಿಕೆಗಳ ಪೈಕಿ 67% ಚಟುವಟಿಕೆಗಳು, ಅರ್ಹವಾದ ಚಟುವಟಿಕೆಗಳ ಪಟ್ಟಿಯಲ್ಲಿರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಚಟುವಟಿಕೆಗಳಾಗಿದ್ದರೆ, ನನ್ನ ತಕ್ಷಣದ ಹಿಂದಿನ 3-ವರ್ಗಳ ಸರಾಸರಿ 67%ಗಿಂತ ಕಡಿಮೆ ಇದ್ದರೆ, ನಾನು ನೋಂದಣಿಗೆ ಅರ್ಹನಾಗುತ್ತೇನೆಯೆ?**

ಉತ್ತರ. ಇಲ್ಲ, ನಿಮ್ಮ ಚಟುವಟಿಕೆಗಳ 3-ವರ್ಷದ ಸರಾಸರಿಯು, ನಿಮ್ಮ ಒಟ್ಟೂ ಚಟುವಟಿಕೆಗಳ 67%ಗೆ ಸಮನಾಗಿ ಅಥವಾ ಅದಕ್ಕಿಂತ ಹೆಚ್ಚಿಗೆ ಆಗುವವರೆಗೆ, ಎಸ್ಎಸ್ಇದಲ್ಲಿ ನೋಂದಣಿಗಾಗಿ ಅಥವಾ ಪಟ್ಟಿಮಾಡುವಿಕೆಗಾಗಿ ಅರ್ಜಿಸ ಲ್ಲಿಸಲು ನೀವು ಅರ್ಹರಾಗುವುದಿಲ್ಲ.

17. **ಕಾರ್ಪೊರೇಟ್ ಮಂಡಳಿಯ ಪ್ರಾಯೋಜಕರ ಪ್ರೋತ್ಸಾಹವಿರುವ ಎನ್‌ಪಿಒ ಅರ್ಜಿ ಸಲ್ಲಿಸಲು ಅರ್ಹವಾಗಿರುತ್ತದೆಯೆ?**

ಉತ್ತರ. ಎನ್‌ಪಿಒ, ತನ್ನ ನಿಧಿಸಂಗ್ರಹಣೆಯ 50%ಗಿಂತ ಹೆಚ್ಚಿನ ಪಾಲಿಗೆ ಕಾರ್ಪೊರೇಟ್ ಮೇಲೆ ಅವಲಂಬಿತವಾಗಿದ್ದರೆ, ಅದು ಅರ್ಜಿ ಸಲ್ಲಿಸಲು ಅರ್ಹವಾಗಿರುತ್ತದೆ.

## ಎನ್‌ಪಿಒ(NPO) ನೋಂದಣಿ

18. **ಸಾಮಾಜಿಕ ಸ್ಟಾಕ್ಎ ಕ್ಸ್‌ಚೇಂಜ್‌ನಲ್ಲಿ ಎನ್‌ಪಿಒ ನೋಂದಣಿ ಮಾಡಿಕೊಳ್ಳುವ ಮುನ್ನ 3 ವರ್ಷಗಳವರೆಗೆ ಕಾರ್ಯಾಚರಣೆಯಲ್ಲಿರಬೇಕೆ?**

ಉತ್ತರ. ಹೌದು, ಲಾಭಕ್ಕಾಗಿಯಲ್ಲದ ಸಂಸ್ಥೆಯೊಂದು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮುನ್ನ ಕಡ್ಡಾಯವಾಗಿ 3 ವರ್ಷಗಳವರೆಗೆ ಕಾರ್ಯಾಚರಣೆಯಲ್ಲಿರಬೇಕು.

19. **ಎನ್‌ಪಿಒ 3 ವರ್ಷಗಳವರೆಗೆ ಕಾರ್ಯಾಚರಣೆಯಲ್ಲಿದೆ ಎಂಬುದನ್ನು ಸಾಬೀತುಪಡಿಸಲು ಯಾವ ಪುರಾವೆ ಅಗತ್ಯ?**

ಉತ್ತರ.ಅನುಷ್ಠಾನದ ಪ್ರಮಾಣಪತ್ರ ಮತ್ತು ಮೂರು ವರ್ಷಗಳಿಗಾಗಿ

ಲೆಕ್ಕಪರಿಶೋಧನೆ(ಆಡಿಟ್) ಮಾಡಲಾದ ಹಣಕಾಸಿನ ಪ್ರಮಾಣಪತ್ರ ಮುಂತಾದ ದಾಖಲೆಗಳು ಎನ್‌ಪಿಒ 3 ವರ್ಷಗಳಿಂದ ಕಾರ್ಯಾಚರಣೆಯಲ್ಲಿದೆ ಎಂಬುದನ್ನು ಸಾಬೀತುಪಡಿಸುತ್ತವೆ.

**20. ಎನ್‌ಜಿಒ ದರ್ಪಣ ಪೋರ್ಟಲ್‌ನಲ್ಲಿ ನೋಂದಣಿಯಾಗಿರದ ಒಂದು ಎನ್‌ಪಿಒ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದೆ?**

ಉತ್ತರ. ಇಲ್ಲ, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದಕ್ಕೆ ಎನ್‌ಪಿಒ, ಎನ್‌ಜಿಒ ದರ್ಪಣ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.

**21. ನೋಂದಣಿಗಾಗಿ ಸಲ್ಲಿಸಬೇಕಾದ ದಾಖಲೆಗಳನ್ನು ಯಾರು ಪ್ರಮಾಣೀಕರಿಸುತ್ತಾರೆ?**

ಉತ್ತರ.ದಾಖಲೆಗಳನ್ನು ಸಿಇಒ ಅಥವಾ ಆಡಳಿತ ಮಂಡಳಿಯ ಇಬ್ಬರು ಅಧಿಕೃತ ಸಿಗ್ನೇಟರಿಗಳು ಪ್ರಮಾಣೀಕರಿಸಿರಬೇಕು.

**22. ಒಂದು ಎನ್‌ಪಿಒ ಎಸ್‌ಎಸ್ ಇದಲ್ಲಿ ನೋಂದಣಿಯಾಗಿದ್ದರೆ, ಅವುಗಳು ಅದರಲ್ಲಿ ಯಾವುದೇ ಸಂಲೇಖಗಳನ್ನು ಪಟ್ಟಿಮಾಡಿಲ್ಲದಿದ್ದರೂ ಎಲ್ಲಾ ಅನುಸರಣೆಗಳನ್ನೂ ಪಾಲಿಸಬೇಕೆ?**

ಉತ್ತರ. ಹೌದು. ಎನ್‌ಪಿಒ, ಅನ್ವಯವಾಗುವ ಎಲ್ಲಾ SEBI (LODR) ನಿಯಮಗಳು, 2015 ಮತ್ತು ತದನಂತರದಲ್ಲಿ ಹೊರಡಿಸಲಾದ ಸುತ್ತೋಲೆಯ ಅನುಸರಣೆ ಮಾಡಬೇಕು.

**23. ಇದು ಭಾರತೀಯ ಸಂಸ್ಥೆಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಅಥವಾ ಅಂತರರಾಷ್ಟ್ರೀಯ ಎನ್‌ಪಿಒಗಳೂ ನೋಂದಣಿ ಮಾಡಿಕೊಳ್ಳಬಹುದೆ?**

ಉತ್ತರ.ಕೇವಲ ಭಾರತೀಯ ಸಂಸ್ಥೆಗಳು ಮಾತ್ರ ಸಾಮಾಜಿಕ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು.

**24. ಯಾವುದೇ ಕಾರ್ಪೊರೇಟ್, ಔಪಚಾರಿಕ ಸಂಸ್ಥೆಯ ರಚನೆಯ ಮೂಲಕ ಒಂದು ಎನ್‌ಪಿಒಅನ್ನು ಪ್ರಾಯೋಜಿಸುತ್ತಿದ್ದು ನಂತರ ಎಸ್‌ಎಸ್‌ಇ ದಲ್ಲಿಎನ್‌ಪಿಒ ವನ್ನುನೋಂದಣಿ ಮಾಡಿಕೊಳ್ಳಲು ಬಯಸಿದರೆ, ಅದಕ್ಕೆ ಅನುಮತಿ ಇದೆಯೆ?**

ಉತ್ತರ. ಇಲ್ಲ, ಎನ್‌ಪಿಒಗಾಗಿ ಬಹುತೇಕ ನಿಧಿನೆರವು ಮೇಲೆ ತಿಳಿಸಿದ ಕಾರ್ಪೊರೇಟ್‌ನಿಂದ ಬರುತ್ತಿದ್ದರೆ ಅಥವಾ ಕಾರ್ಪೊರೇಟ್ ಎನ್‌ಪಿಒದಲ್ಲಿನಿಯಂತ್ರಣದ ಆಸಕ್ತಿಯನ್ನು ಹೊಂದಿದ್ದರೆ, ಅದಕ್ಕೆ ಅನುಮತಿ ಇಲ್ಲ.

25. **ಒಂದು ಎನ್‌ಪಿಒ ಹಿಂದಿನ ವರ್ಷ ಎಸ್‌ಎಸ್‌ಇ ಮೂಲಕ ಯಾವುದೇ ಹಣ ಸಂಗ್ರಹಿಸಿಲ್ಲದಿದ್ದರೆ, ಒಂದು ವರ್ಷದ ತರುವಾಯ ಅದು ನೋಂದಣಿಯನ್ನು ನವೀಕರಿಸಿಕೊಳ್ಳುವುದು ಸಾಧ್ಯವೆ?**

ಉತ್ತರ.ಹೌದು, ಒಂದು ಎನ್‌ಪಿಒ ಹಿಂದಿನ ವರ್ಷ ಎಸ್‌ಎಸ್‌ಇ ಮೂಲಕ ಯಾವುದೇ ಹಣ ಸಂಗ್ರಹಿಸಿಲ್ಲದಿದ್ದರೆ, ಒಂದು ವರ್ಷದ ತರುವಾಯ ಅದು ನೋಂದಣಿಯನ್ನು ನವೀಕರಿಸಿಕೊಳ್ಳುವುದು ಸಾಧ್ಯ.

ಆದರೆ, ಅಗತ್ಯವಿರುವಂತೆ ಅವು ಎಲ್ಲಾ ಬಿಡುಗಡೆಗಳನ್ನೂ ಪೂರ್ಣಗೊಳಿಸಿರಬೇಕು.

26. **ಒಂದು ವೇಳೆ ನಾವು ಎಸ್‌ಇ ಆಗಿ ನೋಂದಣಿಯಾಗಿ, ಕಾರ್ಯಾಚರಣೆ ಮುಂದುವರಿಸುತ್ತಿರುವಂತಹ ಯಾವುದೇ ಸಮಯದಲ್ಲಾದರೂ ಯಾವುದೇ ಮಾರ್ಗಸೂಚಿಗಳನ್ನು ಅನುಸರಿಸಲು ವಿಫಲರಾಗುತ್ತೇವೆ ಎಂದಿಟ್ಟುಕೊಳ್ಳಿ. ಆಗ ಸಂಭಾವ್ಯ ಪರಿಣಾಮಗಳು ಏನಾಗಿರುತ್ತವೆ?**

ಉತ್ತರ.ಇತರ ಪಟ್ಟಿ ಮಾಡಲಾದ ಸಂಸ್ಥೆಗಳಂತೆಯೇ. ಅರ್ಹತೆ ಇಲ್ಲದಿದ್ದಾಗ ಯಾಂತ್ರೀಕೃತವಾಗಿ ಹೊರಗಿಡಲಾಗುತ್ತದೆ. ಆದರೆ, ಅಗತ್ಯ ನಿರ್ಬಂಧಗಳನ್ನು ಪೂರೈಸಿದ ಬಳಿಕವೂ ದಂಡ ಪಾವತಿಸಿ ಮರುಸ್ಥಾಪಿಸಿಕೊಳ್ಳಬೇಕಾಗುತ್ತದೆ. 3 ತಿಂಗಳು ಇಟ್ಟಿರಲಾಗುತ್ತದೆ. ಪಟ್ಟಿ ಮಾಡಲಾದ ಸಂಸ್ಥೆಗಳಿಗೆ ಯಾವುದೇ ಸಮಯದಲ್ಲಾದರೂ ರದ್ದತಿಯನ್ನು ರಿವೋಕ್ ಮಾಡಬಹುದಾಗಿದೆ. ಗ್ರೇಸ್ ಸಮಯ ನೀಡಲಾಗುತ್ತದೆ. ಜೊತೆಗೆ, ರದ್ದುಗೊಳಿಸಲಾದ ಸಂಸ್ಥೆಗಳನ್ನು ದಂಡ ಪಾವತಿಸಿ ಮರುಸ್ಥಾಪಿಸಿಕೊಳ್ಳಲು ಅನುಮತಿಸಲಾಗುತ್ತದೆ.

## ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳು(ZeroCouponZeroPrincipalinstruments)

27. **ಲಾಭಕ್ಕಾಗಿ ಇರುವ ಸಂಸ್ಥೆಗಳು ನಿಧಿಸಂಗ್ರಹಣೆಗಾಗಿ ಶೂನ್ಯ ಕೂಪನ್** ಶೂನ್ಯ **ಅಸಲು ಸಂಲೇಖಗಳು ಗಳನ್ನು ನೀಡಬಹುದೆ?**

ಉತ್ತರ.ಇಲ್ಲ. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳುಳನ್ನು, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿಯಾಗಿರುವ ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಮಾತ್ರ ನೀಡಬಹುದು.

**28. ಯಾವ ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ನೀಡಲು ಅರ್ಹವಾಗಿರುತ್ತವೆ? -**

ಉತ್ತರ.ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ನೀಡುವುದಕ್ಕೆ ಕೆಳಕಂಡ ನಿಬಂಧನೆಗಳನ್ನು ಪೂರೈಸಿರಬೇಕು:

i. ಲಾಭಕ್ಕಾಗಿಯಲ್ಲದ ಸಂಸ್ಥೆಯು ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿಯಾಗಿರಬೇಕು, ಮತ್ತು
ii. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳು ನಿರ್ದಿಷ್ಟ ಕಾಲಾವಧಿಯವರೆಗೆ ಮಾತ್ರ ಇದ್ದು, ನಿಧಿಸಂಗ್ರಹಣೆ ದಾಖಲೆಯಲ್ಲಿ ನಿರ್ದಿಷ್ಟಗೊಳಿಸಲಾದ ಕಾಲಮಿತಿಯೊಳಗೆ ಪೂರ್ಣಗೊಳ್ಳಬೇಕಾದ ನಿರ್ದಿಷ್ಟ ಯೋಜನೆ ಅಥವಾ ಚಟುವಟಿಕೆಗೆ ಮಾತ್ರ ನೀಡಿರಬೇಕು, ಮತ್ತು
iii. ಶೂನ್ಯಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ನೀಡಲಾದ ನಿರ್ದಿಷ್ಟ ಯೋಜನೆ ಅಥವಾ ಚಟುವಟಿಕೆಯು, SEBI (ICDR)ನಿಯಮಗಳು 2018ದ ನಿಯಮ 292E ಅಡಿ ನಿರ್ದಿಷ್ಟಗೊಳಿಸಲಾಗಿರುವ ಅರ್ಹ ಚಟುವಟಿಕೆಗಳ ಪಟ್ಟಿಯಲ್ಲಿರಬೇಕು.

**29. ಲಾಭಕ್ಕಾಗಿಯಲ್ಲದ ಸಂಸ್ಥೆಗಳು ಶೂನ್ಯಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ಖಾಸಗಿಯಾಗಿ ನೀಡಬಹುದೆ?**

ಉತ್ತರ. ಹೌದು. ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿಯಾಗಿರುವ ಲಾಭಕ್ಕಾಗಿಯಲ್ಲದ ಸಂಸ್ಥೆಯು ಭಾರತದ ಭದ್ರತಾ ಪತ್ರಗಳು ಮತ್ತು ವಿನಿಮಯ ಮಂಡಳಿ(ಪರ್ಯಾಯ ಹೂಡಿಕೆನಿಧಿಗಳು) ನಿಯಮಗಳು, 2012ದ ಆನ್ವಯಿಕ ನಿಯಮಗಳಡಿ ನೋಂದಾಯಿತಗೊಂಡ ಸಾಮಾಜಿಕ ಪ್ರಭಾವದ ನಿಧಿಗಳಿಗೆ(Social Impact Fund(s)) ಶೂನ್ಯಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ಖಾಸಗಿಯಾಗಿ ನೀಡಬಹುದು.

**30. ಲಾಭಕ್ಕಾಗಿಯಲ್ಲದ ಸಂಸ್ಥೆಯಿಂದ ಶೂನ್ಯಕೂಪನ್ ಶೂನ್ಯ ಅಸಲು ಸಂಲೇಖಗಳ ಸಾರ್ವಜನಿಕ ನೀಡಿಕೆಗೆ ಇರುವ ಕಾರ್ಯವಿಧಾನ ಯಾವುದು?**

**ಉತ್ತರ.**

i. ಲಾಭಕ್ಕಾಗಿಯಲ್ಲದ ಸಂಸ್ಥೆಯು, ಅರ್ಜಿಯ ಜೊತೆಗೆ, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ಪಟ್ಟಿ ಮಾಡುವುದಕ್ಕೆ ಚಾಲ್ತಿಯಲ್ಲಿರುವ ಅನುಮೋದನೆಗಾಗಿ ತಾನು ನೋಂದಾಯಿತಗೊಂಡಿರುವ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ನಿರ್ದೇಶನಗೊಳಿಸಿದ ಶುಲ್ಕದ ಜೊತೆಗೆ, ಕರಡು ನಿಧಿಸಂಗ್ರಹಣಾ ದಾಖಲೆಯನ್ನು ಫೈಲ್ ಮಾಡಬೇಕು.

ii. ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ , ಸಾರ್ವಜನಿಕ ಅಭಿಪ್ರಾಯಗಳಿಗಾಗಿ ಕನಿಷ್ಟ 21 ದಿನಗಳ ಅವಧಿಯವರೆಗೆ ತನ್ನ ವೆಬ್‌ಸೈಟ್‌ನಲ್ಲಿ ಕರಡು ನಿಧಿಸಂಗ್ರಹಣಾ ದಾಖಲೆಯನ್ನು ಲಭ್ಯಗೊಳಿಸಿರುತ್ತದೆ.

iii. ಅಗತ್ಯವಾದಲ್ಲಿ, ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ , ಲಾಭಕ್ಕಾಗಿಯಲ್ಲದ ಸಂಸ್ಥೆಯಿಂದ ಸ್ಪಷ್ಟನೆಗಳನ್ನು ಕೇಳಬಹುದಾಗಿದೆ.

iv. ಕರಡು ನಿಧಿಸಂಗ್ರಹಣಾ ದಾಖಲೆಯನ್ನು ಫೈಲ್ ಮಾಡಿದ ಅಥವಾ ಲಾಭಕ್ಕಾಗಿಯಲ್ಲದ ಸಂಸ್ಥೆಯಿಂದ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಯಾವುದೇ ಸ್ಪಷ್ಟನೆ ಸ್ವೀಕರಿಸಿದ 30 ದಿನಗಳೊಳಗೆ, ಯಾವುದು ಮುಂಚಿತವಾಗಿ ಬರುತ್ತದೋ ಅದು, ಅಂತಹ ದಿನಗಳೊಳಗೆ, ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ , ಲಾಭಕ್ಕಾಗಿಯಲ್ಲದ ಸಂಸ್ಥೆಗೆ ಕರಡು ನಿಧಿಸಂಗ್ರಹಣಾ ದಾಖಲೆಯ ಕುರಿತು ತನ್ನ ಗಮನಿಕೆಗಳನ್ನು(ಅಭಿಪ್ರಾಯಗಳನ್ನು) ಒದಗಿಸಬೇಕು.

v. ಲಾಭಕ್ಕಾಗಿಯಲ್ಲದ ಸಂಸ್ಥೆಯು, ಕರಡು ನಿಧಿಸಂಗ್ರಹಣಾ ದಾಖಲೆಯಲ್ಲಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್ ಸೂಚಿಸಿದ ಅಭಿಪ್ರಾಯಗಳನ್ನು ಸೇರಿಸಿ, ಇಶ್ಯು ತೆರೆಯುವ ಮುನ್ನವೇ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ಅಂತಿಮ ನಿಧಿಸಂಗ್ರಹಣಾ ದಾಖಲೆಯನ್ನು ಫೈಲ್ ಮಾಡಬೇಕು.

ಅನ್ವಯವಾಗುವ ಮಿತಿಯವರೆಗೆ, ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಖಾಸಗಿ ನೀಡಿಕೆಗೂ ಇದೇ ಕಾರ್ಯವಿಧಾನ ಅನುಸರಿಸಬೇಕು.

**31. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ಭೌತಿಕ ರೂಪದಲ್ಲಿ ನೀಡಬಹುದೆ?**

ಉತ್ತರ. ಇಲ್ಲ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳನ್ನು ಡೀಮೆಟೀರಿಯಲೈಜ್ಡ್ (ಡೀಮ್ಯಾಟ್) ರೂಪದಲ್ಲಿ ಮಾತ್ರವೇ ನೀಡಬೇಕು.

**32. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ನೀಡಿಕೆಯ ಗಾತ್ರಕ್ಕೆ(ಪ್ರಮಾಣಕ್ಕೆ) ಯಾವುದೇ ಮಿತಿ ಇದೆಯೆ?**

ಉತ್ತರ. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ನೀಡಿಕೆಗೆ ಕನಿಷ್ಟ ನೀಡಿಕೆ ಪ್ರಮಾಣವು ಒಂದು ಕೋಟಿ ರೂಪಾಯಿ ಆಗಿರಬೇಕು ಮತ್ತು ಕನಿಷ್ಟ ಅರ್ಜಿ ಪ್ರಮಾಣವು ಎರಡು ಲಕ್ಷ ರೂಪಾಯಿಗಳಾಗಿರಬೇಕು.

**33. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಯಶಸ್ವೀ ನೀಡಿಕೆಯನ್ನು ಸಾಧಿಸಲು ಅಗತ್ಯವಾದ ಕನಿಷ್ಟ ಸಬ್‌ಸ್ಕ್ರಿಪ್ಷನ್ ಎಷ್ಟು?**

ಅಗತ್ಯವಾದ ಕನಿಷ್ಟ ಸಬ್‌ಸ್ಕ್ರಿಪ್ಷನ್ ಸಾಧಿಸಲು, ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ನೀಡಿಕೆಯ ಮೂಲಕ ಸಂಗ್ರಹಿಸಲು ಉದ್ದೇಶಿಸಿರುವ ನಿಧಿಗಳ ಪೈಕಿ 75%ನಷ್ಟು ಆಗಿರಬೇಕು.

**34. ಸಾಮಾಜಿಕ ಉದ್ದಿಮೆಯು, ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಪಟ್ಟಿಮಾಡುವಿಕೆಯನ್ನು ಅಂತ್ಯಗೊಳಿಸಬಹುದೆ?**

ಉತ್ತರ. ಸಾಮಾಜಿಕ ಉದ್ದಿಮೆಯು, ಕೆಳಕಂಡ ಸಂದರ್ಭಗಳಲ್ಲಿ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಪಟ್ಟಿಮಾಡುವಿಕೆಯನ್ನು ಅಂತ್ಯಗೊಳಿಸಬಹುದು -

i. ನಿಧಿಸಂಗ್ರಹಣೆ ಮಾಡಿದ ಧ್ಯೇಯೋದ್ದೇಶವು ಸಾಧಿತವಾಗಿರಬೇಕು ಮತ್ತು ಈ ನಿಟ್ಟಿನಲ್ಲಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ಗೆ ಪ್ರಮಾಣಪತ್ರ ಸಲ್ಲಿಸಿರಬೇಕು, ಅಥವಾ

ii. ನಿಧಿಸಂಗ್ರಹಣಾ ದಾಖಲೆಯಲ್ಲಿ ಒದಗಿಸಲಾಗಿರುವಂತೆ, ನಿಧಿಸಂಗ್ರಹಣೆ ಮಾಡಿದ ಧ್ಯೇಯೋದ್ದೇಶವನ್ನು ಸಾಧಿಸಬೇಕಾದ ಕಾಲಾವಧಿಯು ತೀರಿ ಹೋಗಿರಬೇಕು.

**35. ಸಾಮಾಜಿಕ ಉದ್ದಿಮೆಗಳಿಂದ ಪಟ್ಟಿಮಾಡಲಾದ ಸಂಲೇಖಗಳು, ದ್ವಿತೀಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕೆ ಲಭ್ಯವಿರುತ್ತವೆಯೆ?**

ಉತ್ತರ. ಲಾಭಕ್ಕಾಗಿಯಲ್ಲದ ಸಂಸ್ಥೆಗಳು ನೀಡುವ ಸಂಲೇಖಗಳು ದ್ವಿತೀಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕೆ ಲಭ್ಯವಿರುವುದಿಲ್ಲ. ಬದಲಿಗೆ, ಲಾಭಕ್ಕಾಗಿ ಇರುವ ಸಂಸ್ಥೆಗಳು ನೀಡಿದ ಸಂಲೇಖಗಳು, ಅವು ಪಟ್ಟಿಮಾಡಲ್ಪಟ್ಟಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳ ಆಯಾ ವೇದಿಕೆಗಳ ದ್ವಿತೀಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕೆ ಲಭ್ಯವಿರುತ್ತವೆ.

**ಸಾಮಾಜಿಕ ಲೆಕ್ಕಪರಿಶೋಧಕರು ಮತ್ತು ಸಾಮಾಜಿಕ ಪ್ರಭಾವ ಮೌಲ್ಯಮಾಪನ**

**36. ಸಾಮಾಜಿಕ ಲೆಕ್ಕಪರಿಶೋಧನೆ ಅಂದರೇನು?**

ಉತ್ತರ. ಸಾಮಾಜಿಕ ಲೆಕ್ಕಪರಿಶೋಧನೆ ಅಂದರೆ, ಸ್ವತಂತ್ರ ತಪಾಸಣೆಯ ಮೂಲಕ ಸಾಮಾಜಿಕ ಉದ್ದಿಮೆಗಳು ಅನುಷ್ಠಾನಗೊಳಿಸುವ ಯೋಜನೆ/ಕಾರ್ಯಕ್ರಮದ ಸಾಮಾಜಿಕ ಪ್ರಭಾವದ ಮೌಲ್ಯಮಾಪನ. ಇದು ದರ್ಶನ ಮತ್ತು ವಾಸ್ತವತೆಯ ನಡುವಿನ ಅಸ್ಥಿರತೆಗಳನ್ನು ಕಡಿಮೆ ಮಾಡಲು ಮತ್ತು ಸಾಮರ್ಥ್ಯ ಹಾಗೂ ಪರಿಣಾಮಕಾರಿತ್ವದ ನಡುವಿನ ಅಸ್ಥಿರತೆಗಳನ್ನು ಕೂಡ ಕಡಿಮೆ ಮಾಡಲು ನೆರವಾಗುತ್ತದೆ.

**37. ಸಾಮಾಜಿಕ ಲೆಕ್ಕಪರಿಶೋಧನಾ ಸಂಸ್ಥೆ ಅಂದರೆ ಏನು?**

ಸಾಮಾಜಿಕ ಲೆಕ್ಕಪರಿಶೋಧನಾ ಸಂಸ್ಥೆ ಎಂದರೆ, ಸಾಮಾಜಿಕ ಲೆಕ್ಕಪರಿಶೋಧಕರನ್ನು ಉದ್ಯೋಗಕ್ಕೆ ನೇಮಕ ಮಾಡಿಕೊಂಡಿರುವ ಮತ್ತು ಸಾಮಾಜಿಕ ಪ್ರಭಾವ ಮೌಲ್ಯಮಾಪನವನ್ನು ನೆರವೇರಿಸುವುದಕ್ಕೆ ಕನಿಷ್ಟ 3 ವರ್ಷಗಳ ಟ್ರ್ಯಾಕ್ ರೆಕಾರ್ಡ್ ಹೊಂದಿರುವ ಸಂಸ್ಥೆ.

**38. ಯಾರುಸಾಮಾಜಿಕಲೆಕ್ಕಪರಿಶೋಧಕರಾಗಿಕಾರ್ಯನಿರ್ವಹಿಸಬಹುದು?**

ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ(ಅಥವಾ SEBI ನಿರ್ದಿಷ್ಟಗೊಳಿಸಲಾಗಿರುವಂತೆ ಯಾವುದೇ ಅಂತಹ ಇತರ ಏಜೆನ್ಸಿ) ಅಡಿ ಸ್ವಯಂ-ನಿರ್ಬಂಧಿತ ಸಂಸ್ಥೆಯೊಂದಿಗೆ ನೋಂದಾಯಿತಗೊಂಡಿರುವ ವ್ಯಕ್ತಿ ಮತ್ತು ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೆಕ್ಯುರಿಟೀಸ್ ಮಾರ್ಕೆಟ್ ನರವೇರಿಸಿದ ಪ್ರಮಾಣಪತ್ರ ಪ್ರೊಗ್ರಾಮ್‌ನಲ್ಲಿ ಅರ್ಹತೆ ಪಡೆದ ಮತ್ತು ಸಾಮಾಜಿಕ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಮಾನ್ಯತೆಯಿರುವ ಪ್ರಮಾಣಪತ್ರ ಹೊಂದಿರುವವ್ಯಕ್ತಿ.

**ಸಾಮಾನ್ಯ**

**39. ಯಾವುದೇ ಎನ್‌ಪಿಒ ನೋಂದಣಿ ಮತ್ತು ಮಾರುಕಟ್ಟೆಯಿಂದ ನಿಧಿಸಂಗ್ರಹಣೆಗಳ ನಡುವೆ ಯಾವುದೇ ಲಾಕ್-ಇನ್ ಅಥವಾ ಕನಿಷ್ಟಕಾಲಾವಧಿ ಇದೆಯೆ?**

ಉತ್ತರ. ಇಲ್ಲ, ಯಾವುದೇ ಎನ್‌ಪಿಒ ನೋಂದಣಿ ಮತ್ತು ಮಾರುಕಟ್ಟೆಯಿಂದ ನಿಧಿಸಂಗ್ರಹಣೆಗಳ ನಡುವೆ ಯಾವುದೇ ಲಾಕ್-ಇನ್ ಅಥವಾ ಕನಿಷ್ಟ ಕಾಲಾವಧಿ ಇಲ್ಲ.

**40. ಕರಡು ನಿಧಿ-ಸಂಗ್ರಹಣೆ ದಾಖಲೆ ತಯಾರಿಸಲು ವರ್ತಕ ಬ್ಯಾಂಕರ್‌ಅನ್ನು ನೇಮಕಾತಿ ಮಾಡಿಕೊಳ್ಳುವ ಅಗತ್ಯವಿದೆಯೆ ?**

ಉತ್ತರ.ಅಗತ್ಯವಿಲ್ಲ.

**41. ಕರಡು ನಿಧಿ-ಸಂಗ್ರಹಣೆ ದಾಖಲೆಯ ಕುರಿತು ಎಸ್‌ಎಸ್‌ಇ ನೀಡುವ ಅಭಿಪ್ರಾಯಗಳಿಗೆ ಮಾನ್ಯತಾ ಅವಧಿ ಇರುತ್ತದೆಯೆ?**

ಉತ್ತರ. ಕರಡು ನಿಧಿ-ಸಂಗ್ರಹಣೆ ದಾಖಲೆಯ ಕುರಿತು ಎಸ್‌ಎಸ್‌ಇ ನೀಡುವ ಅಭಿಪ್ರಾಯಗಳಿಗೆ 6 ತಿಂಗಳ ಮಾನ್ಯತಾ ಅವಧಿ ಇರುತ್ತದೆ.

**42. ಎನ್‌ಪಿಒ ಸಂಗ್ರಹಿಸುವ ನಿಧಿಗಳು ಅನುದಾನದ ರೂಪದಲ್ಲಿರುತ್ತದೆಯೇ ಅಥವಾ ಸಾಲದ ರೂಪದಲ್ಲಿರುತ್ತದೆಯೇ ಎಂಬುದನ್ನು ದಯವಿಟ್ಟು ಸ್ಪಷ್ಟಪಡಿಸಿ?**

ಉತ್ತರ.ಎನ್‌ಪಿಒ ಸಂಗ್ರಹಿಸುವ ನಿಧಿಗಳು ಅನುದಾನದ ರೂಪದಲ್ಲಿರುತ್ತದೆ.

**43. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಖಾಸಗಿ ಪ್ಲೇಸ್‌ಮೆಂಟ್‌ಅನ್ನು SEBI AIFs ನಿಯಮಗಳಡಿ ನೋಂದಣಿಯಾಗಿರುವ ಸಾಮಾಜಿಕ ಪ್ರಭಾವ ನಿಧಿಗಳಲ್ಲದೆ ಬೇರೆ ವ್ಯಕ್ತಿಗೆ ಮಾಡಬಹುದೆ?**

ಉತ್ತರ. ಹೌದು, ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಖಾಸಗಿ ಪ್ಲೇಸ್‌ಮೆಂಟ್‌ಅನ್ನು SEBI AIFs ನಿಯಮಗಳಡಿ ನೋಂದಣಿಯಾಗಿರುವ ಸಾಮಾಜಿಕ ಪ್ರಭಾವ ನಿಧಿಗಳಲ್ಲದೆ ಬೇರೆ ವ್ಯಕ್ತಿಗೆ ಮಾಡಬಹುದು.

**44. ಸಾಮಾಜಿಕ ಪ್ರಭಾವ ನಿಧಿಗಳಿಗೆ ನೀಡಲಾದ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಖಾಸಗಿ ಪ್ಲೇಸ್‌ಮೆಂಟ್‌ಅನ್ನು ಕಡ್ಡಾಯವಾಗಿ ಸಾಮಾಜಿಕ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿಮಾಡಬೇಕೆ?**

ಉತ್ತರ. ಹೌದು, ಸಾಮಾಜಿಕ ಪ್ರಭಾವ ನಿಧಿಗಳಿಗೆ ನೀಡಲಾದ ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ಖಾಸಗಿ ಪ್ಲೇಸ್‌ಮೆಂಟ್‌ಅನ್ನು ಕಡ್ಡಾಯವಾಗಿ ಸಾಮಾಜಿಕ

ಸ್ಟಾಕ್ಎಕ್ಸ್‌ಚೇಂಜ್‌ನಲ್ಲಿ ಪಟ್ಟಿಮಾಡಬೇಕು.

**45. ಶೂನ್ಯ ಕೂಪನ್ ಶೂನ್ಯ ಅಸಲು(ZCZP)ಸಂಲೇಖ ಯೋಜನೆಗಾಗಿ ಇರುವ ನಿಧಿಗಳನ್ನು ಎಸ್ಎಸ್ಇ ಮೂಲಕವೇ ಸಂಗ್ರಹಿಸಬೇಕೆ ಅಥವಾ ಕೆಲವನ್ನು ಎಸ್ಎಸ್ಇ ಆಚೆಯೂ ಸಂಗ್ರಹಿಸಬಹುದೆ?**

ಉತ್ತರ.ಹೌದು, ZCZP ಸಂಲೇಖ ಯೋಜನೆಗಾಗಿ ನಿಧಿಗಳನ್ನು ಎಸ್ಎಸ್ಇ ಮೂಲಕ ಸಂಗ್ರಹಿಸಬಹುದು ಅಥವಾ ಎಸ್ಎಸ್ಇ ಆಚೆಯೂ ಸಂಗ್ರಹಿಸಬಹುದು. ನಿಗದಿಯಾದ ನಿಯಮಗಳನ್ನು ನೋಡಬಹುದು.

**46. ವಿದೇಶೀ ಸಾಂಸ್ಥಿಕ ಹೂಡಿಕೆದಾರರು ಅಥವಾ ವೈಯಕ್ತಿಕ ಅನಿವಾಸ ದಾನಿಗಳಿಂದ ನಿಧಿಗಳನ್ನು ಸಂಗ್ರಹಿಸುವ ಮುನ್ನ ಎನ್‌ಜಿಒ/ಎನ್‌ಪಿಒ, FCRA ನೋಂದಣಿಯನ್ನು ಪಡೆದುಕೊಳ್ಳಬೇಕೆ?**

ಉತ್ತರ.ಪ್ರಸ್ತುತ ಎಸ್ಎಸ್ಇ ಮೂಲಕ ವಿದೇಶೀ ಹೂಡಿಕೆದಾರರು ಹೂಡಿಕೆ ಮಾಡುವುದಕ್ಕೆ ಅವಕಾಶವಿಲ್ಲ.

**47. ಒಂದೇ ಸಂಲೇಖದಲ್ಲಿ ವಿದೇಶೀ ನಿಧಿ ನೆರವು ಮತ್ತು ಸ್ಥಳೀಯ ನಿಧಿ ನೆರವನ್ನು ನಿರ್ವಹಿಸುವುದು ಹೇಗೆ ಅಥವಾ ಎನ್ಆರ್ಐಗಳು/ವಿದೇಶೀ ಹೂಡಿಕೆದಾರರಿಗೆ ಪ್ರತ್ಯೇಕ ಸಂಲೇಖಗಳು ಇರುತ್ತವೆಯೆ?**

ಉತ್ತರ.ಪ್ರಸ್ತುತ ವಿದೇಶೀ ನಿಧಿ ನೆರವಿಗೆ ಅನುಮತಿ ಇಲ್ಲ.

**48. ಎನ್‌ಪಿಒ ಯೋಜನೆಯನ್ನು ಪ್ರಸ್ತಾವನೆಗೆ ಹಾಕಿದ ಬಳಿಕ ನಿಧಿಸಂಗ್ರಹಣೆ ಹೇಗೆ ನೆರವೇರುತ್ತದೆ? ಹೂಡಿಕೆದಾರರು ಪ್ರಸ್ತಾವನೆಗಳನ್ನು ಗಮನಿಸಿ ಎನ್‌ಪಿಒದೊಂದಿಗೆ ಸಂಪರ್ಕ ಬೆಳೆಸುತ್ತಾರೆಯೇ ಅಥವಾ ಎನ್‌ಪಿಒ ಸ್ವತಃ ತಾನೇ ಬೆಂಬಲ ಕೋರಬೇಕಾಗುತ್ತದೆಯೆ ?**

ಉತ್ತರ.ಮಾರ್ಕೆಟಿಂಗ್‌ನಲ್ಲಿ ಎಸ್ಎಸ್ಇ ಪಾತ್ರವಹಿಸುತ್ತದೆ.

**49. ಹೂಡಿಕೆದಾರರನ್ನು ದಾನಿಗಳು ಎಂದು ಪರಿಗಣಿಸಲಾಗುತ್ತದೆಯೆ? ಸ್ವೀಕರಿಸಿದ**

**ನಿಧಿಗಳನ್ನು ಯಾವ ರೀತಿ ಲೆಕ್ಕ ಹಾಕಲಾಗುತ್ತದೆ?**

ಉತ್ತರ.ಹೌದು. ಹೂಡಿಕೆದಾರರನ್ನುಸಾಮಾನ್ಯ ಲೆಕ್ಕಪತ್ರ ನೀತಿಗಳ ಪ್ರಕಾರ, ದಾನಿಗಳು ಎಂದು ಪರಿಗಣಿಸಲಾಗುತ್ತದೆ.

**50. ZCZP ಇಶ್ಯು ಸಂಪೂರ್ಣವಾಗಿ ಸಬ್ ಸ್ಕ್ರೈಬ್ ಆಗಿಲ್ಲದಿದ್ದರೆ ಏನಾಗುತ್ತದೆ?**

ಉತ್ತರ.ಇದನ್ನು ಆಫರ್ದಾಖಲೆಯಲ್ಲಿ ನಿರ್ದಿಷ್ಟಗೊಳಿಸಬೇಕಾಗುತ್ತದೆ ಮತ್ತು ಪ್ರಚಲಿತದಲ್ಲಿರುವ ನಿಯಮಗಳಿಗೆ ಒಳಪಟ್ಟಿರುತ್ತದೆ.

**51. ಶೂನ್ಯ ಕೂಪನ್ ಶೂನ್ಯ ಅಸಲು ಹೋಲ್ಡಿಂಗ್ಸ್‌ಗಳನ್ನು ವರ್ಗಾವಣೆ ಮಾಡಬಹುದೆ?**

ಉತ್ತರ. ZCZP ವ್ಯಾಪಾರಕ್ಕೆ ಅನುಮತಿ ಇಲ್ಲವಾದರೂ, ಕಾನೂನುಬದ್ಧ ವಾರಸುದಾರರಿಗೆ ವರ್ಗಾವಣೆ ಮುಂತಾದ ಇತರ ಉದ್ದೇಶಗಳಿಗೆ ಅವುಗಳನ್ನು ವರ್ಗಾವಣೆ ಮಾಡಬಹುದು.

**52. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳು ಭದ್ರತಾ ಪತ್ರವ್ಯವಹಾರದ ತೆರಿಗೆಗೆ ಒಳಪಟ್ಟಿರುತ್ತವೆಯೆ?**

ಉತ್ತರ.ಇಲ್ಲ. ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳು ಭದ್ರತಾಪತ್ರ ವ್ಯವಹಾರದ ತೆರಿಗೆಗೆ ಒಳಪಟ್ಟಿರುವುದಿಲ್ಲ.

**53. ಪಟ್ಟಿಮಾಡಲಾದ ಎನ್‌ಪಿಒ, ಮತ್ತೊಂದು ZCZP ಸಂಲೇಖದ ಮೂಲಕ ಅದೇ ಯೋಜನೆಗೆ ಹೆಚ್ಚುವರಿ ನಿಧಿಸಂಗ್ರಹಣೆ ಮಾಡಬಹುದೆ?**

ಉತ್ತರ.ಹೌದು, ಪಟ್ಟಿಮಾಡಲಾದ ಎನ್‌ಪಿಒ, ಮತ್ತೊಂದುZCZP ಸಂಲೇಖದ ಮೂಲಕ ಅದೇ ಯೋಜನೆಗೆ ಹೆಚ್ಚುವರಿ ನಿಧಿಸಂಗ್ರಹಣೆ ಮಾಡಬಹುದು.

**54. ಪಟ್ಟಿಮಾಡಲಾದ ಎನ್‌ಪಿಒ, ಒಂದು ಯೋಜನೆಗೆ ತಲಾ ಒಂದರಂತೆ, ಅನೇಕ ZCZP ಸಂಲೇಖಗಳನ್ನು ನೀಡುವ ಮೂಲಕ ಒಂದಕ್ಕಿಂತ ಹೆಚ್ಚಿನ ಯೋಜನೆಗೆ ನಿಧಿಗಳನ್ನು ಸಂಗ್ರಹಿಸಬಹುದೆ?**

ಉತ್ತರ.ಹೌದು, ಪಟ್ಟಿಮಾಡಲಾದ ಎನ್‌ಪಿಒ, ಒಂದು ಯೋಜನೆಗೆ ತಲಾ ಒಂದರಂತೆ, ಅನೇಕ ZCZP ಸಂಲೇಖಗಳನ್ನು ನೀಡುವ ಮೂಲಕ ಒಂದಕ್ಕಿಂತ ಹೆಚ್ಚಿನ ಯೋಜನೆಗೆ ನಿಧಿಗಳನ್ನು ಸಂಗ್ರಹಿಸಬಹುದು.

**55. ಸಾಮಾಜಿಕ ಪ್ರಭಾವ ಬಾಂಡ್‌ಗಳು ಮತ್ತು ಅಭಿವೃದ್ಧಿ ಪ್ರಭಾವ ಬಾಂಡ್‌ಗಳು, ಯಶಸ್ಸಿಗಾಗಿ ಪಾವತಿ ನಿಧಿ ನೆರವು ರಚನೆಗಳಾಗಿರುವುದರಿಂದ, ಎನ್‌ಪಿಒಗಳು ಅವುಗಳನ್ನು ನೀಡುವುದಕ್ಕೆ ಅವಕಾಶ ಇದೆಯೆ?**

ಉತ್ತರ. ಹೌದು, ಎನ್‌ಪಿಒಗಳು ಸಾಮಾಜಿಕ ಪ್ರಭಾವ ಬಾಂಡ್‌ಗಳು ಮತ್ತು ಅಭಿವೃದ್ಧಿ ಪ್ರಭಾವ ಬಾಂಡ್‌ಗಳನ್ನು ನೀಡಬಹುದು.

**56. ನೋಂದಾಯಿತ ಎನ್‌ಪಿಒ, ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್  ಆಚೆ ನಿಧಿ ಸಂಗ್ರಹಿಸಿದರೆ, LODR ಅಡಿ ವಾರ್ಷಿಕ ಡಿಸ್ಕ್ಲೋಶರ್‌ನ ಭಾಗವಾಗಿ ಅಂತಹ ನಿಧಿ ನೆರವಿನ ವಿವರಗಳನ್ನು ಬಹಿರಂಗಪಡಿಸುವುದು ಅಗತ್ಯವೆ?**

ಉತ್ತರ.ಹೌದು,  ನೋಂದಾಯಿತ ಎನ್‌ಪಿಒ, ಸಾಮಾಜಿಕ ಸ್ಟಾಕ್ ಎಕ್ಸ್ ಚೇಂಜ್ ಆಚೆ ನಿಧಿಸಂಗ್ರಹಿಸಿದರೆ, LODR ಅಡಿ ವಾರ್ಷಿಕ ಡಿಸ್ಕ್ಲೋಶರ್‌ನ ಭಾಗವಾಗಿ ಅಂತಹ ನಿಧಿ ನೆರವಿನ ವಿವರಗಳನ್ನು ಬಹಿರಂಗಪಡಿಸುವುದು ಅಗತ್ಯ.

**57. ಶೂನ್ಯ ಕೂಪನ್ ಶೂನ್ಯ ಅಸಲುಸಂಲೇಖಗಳರದ್ದತಿಯುಪಟ್ಟಿಮಾಡದಿರುವಿಕೆಗೆ (ಡೀಲಿಸ್ಟಿಂಗ್) ಸಮಾನವೆ?**

ಉತ್ತರ.ಹೌದು, ಶೂನ್ಯ ಕೂಪನ್ ಶೂನ್ಯ ಅಸಲು ಸಂಲೇಖಗಳ ರದ್ದತಿಯು ಪಟ್ಟಿಮಾಡದಿರುವಿಕೆಗೆ(ಡೀಲಿಸ್ಟಿಂಗ್) ಸಮಾನ.

**ಹೂಡಿಕೆದಾರರು**

**58. ನಿಧಿನೆರವಿನ ಬೆಂಬಲವನ್ನು ವಿಸ್ತರಿಸುವುದಕ್ಕೆ ನೋಂದಣಿ ಮಾಡಲು ಕಾರ್ಪೊರೇಟ್‌ಗಳಿಗೆ ಯಾವ ಪ್ರಕ್ರಿಯೆ ಇದೆ?**

ಉತ್ತರ.ಕಾರ್ಪೊರೇಟ್‌ಗಳು, ಸಾಮಾನ್ಯ ಹೂಡಿಕೆದಾರ ನೋಂದಣಿ ಪ್ರಕ್ರಿಯೆಯನ್ನು

ಅನುಸರಿಸಬಹುದು.

**59. ವಿದೇಶೀ ಹೂಡಿಕೆದಾರರು FII's,FPI's ಅಥವಾ NRI ನಿಧಿ ಸಂಗ್ರಹಣೆಯಲ್ಲಿ ಹೂಡಿಕೆ ಮಾಡಬಹುದೆ?**

ಉತ್ತರ.ಇಲ್ಲ, ವಿದೇಶೀ ಹೂಡಿಕೆದಾರರು FII's,FPI's ಅಥವಾ NRI ನಿಧಿ ಸಂಗ್ರಹಣೆಯಲ್ಲಿ ಹೂಡಿಕೆ ಮಾಡುವ ಹಾಗಿಲ್ಲ.